**ಕರ್ನಾಟಕ ಜೀವವೈವಿಧ್ಯ ಮಂಡಳಿ**

# Karnataka Biodiversity Board

**37ನೇ ಮಂಡಳಿ ಸಭೆಯ ಕಾರ್ಯಸೂಚಿಗಳು**

# Agenda notes for 37thBoard Meeting

**37/1 – 36ನೇ ಮಂಡಳಿ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲಿಸುವುದು:**

ದಿನಾಂಕ 29/12/2017ರಂದು ಜರುಗಿದ ಮಂಡಳಿಯ 36ನೇ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೆ ದಿ: 16/01/2018ರಂದು ರವಾನಿಸಲಾಗಿದ್ದು, ಸದಸ್ಯರುಗಳಿಂದ ಯಾವುದೇ ಸಲಹೆ ಅಥವಾ ತಿದ್ದುಪಡಿ ಬಂದಿರುವುದಿಲ್ಲದ ಕಾರಣ ಈ ನಡವಳಿಗಳನ್ನು ಓದಿ ದಾಖಲಿಸಲಾಗಿದೆ. **(ಅನುಬಂಧ– I)**

**37/1-Reading and recording of Proceedings of the 36th Board Meeting.**

The Proceedings of the 36th Board meeting held on 29/12/2017 were communicated to all the members. As there were no comments from the members. The proceedings may be adopted. **(Annexure-I)**

**37/2 – 36ನೇ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳು:**

36ನೇ ಮಂಡಳಿ ಸಭೆಯ ನಡವಳಿಯ ಮೇರೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸಲಾಗಿದೆ. **(ಅನುಬಂಧ–II)**

**37/2 - Action taken on 36th Board meeting proceedings.**

Action taken on proceedings of 36th Board meeting is placed in **(Annexure-II)**

**37/3 – ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗು ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಗತಿ.**

1. ಪ್ರಸ್ತುತ ವರ್ಷದಲ್ಲಿ ಫೆಬ್ರವರಿ 2018ರವರೆಗೆ, 150 ಗ್ರಾಮ ಪಂಚಾಯತಿ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಈವರೆಗೆ 6023 ಗ್ರಾಮ ಪಂಚಾಯತಿಗಳಲ್ಲಿ 4910 ಗ್ರಾಮ ಮಟ್ಟದ, 176 ತಾಲ್ಲೂಕುಗಳಲ್ಲಿ 131 ತಾಲ್ಲೂಕು ಮಟ್ಟದ ಹಾಗು 30 ಜಿಲ್ಲೆಗಳಲ್ಲಿ 14 ಜಿಲ್ಲಾ ಪಂಚಾಯತಿ ಮಟ್ಟದ ಒಟ್ಟು 5217 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ.

2. ಪ್ರಸ್ತುತ ವರ್ಷದಲ್ಲಿ ಫೆಬ್ರವರಿ 2018ರವರೆಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ 293 ಹಾಗು 3 ತಾಲ್ಲೂಕು ಮಟ್ಟದಲ್ಲಿ ಒಟ್ಟು 296 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ. ಈವರೆಗೆ 1647 ಗ್ರಾಮ ಪಂಚಾಯತಿ ಮಟ್ಟದ ಹಾಗು 23 ತಾಲ್ಲೂಕು ಮಟ್ಟದ ಒಟ್ಟು 1670 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ. **(ಅನುಬಂಧ –III)**

3. **ಸಮಾಲೋಚಕರು (ಜ.ಜೀದಾ) ನೇಮಕಾತಿ**: ಮಂಡಳಿಯಲ್ಲಿ ಖಾಲಿಯಿದ್ದ ಸಮಾಲೋಚಕರು (ಪಿಬಿಆರ್) ಹುದ್ದೆಗೆ ವಾರ್ತಾಪತ್ರಿಕೆಗಳು ಹಾಗು ಮಂಡಳಿಯ ವೆಬ್‌ಸೈಟ್‌ನಲ್ಲಿ ಜಾಹಿರಾತನ್ನು ನೀಡಲಾಗಿದ್ದು ದಿನಾಂಕ 20/01/2018ರಂದು ಸಂದರ್ಶನ ನಡೆಸಲಾಯಿತು. ಸಂದರ್ಶನದಲ್ಲಿ ಡಾ. ಕೆ. ಸೌರವಿರವರು ಸದರಿ ಹುದ್ದೆಗೆ ಆಯ್ಕೆಗೊಂಡು ದಿನಾಂಕ 05/02/2018ರಂದು ಮಂಡಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗು ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆಯ ಬಗ್ಗೆ ಕೋ-ಆರ್ಡಿನೇಟ್ ಮಾಡಲು ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನೀಡಲಾಗಿದೆ.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**37/3 - Status of Formation of Biodiversity Management Committees and Preparation of People's Biodiversity Registers.**

1. During the current year, 150 BMCs at Grama Panchayat level have been constituted. Till date 4910 BMCs out of 6023 GPs and 131 BMCs out of 176 TPs and 14 BMCs out of 30 ZPs, totalling to 5217 BMCs have been constituted in the State.
2. During the current year upto February 2018, 293 PBRs at Grama panchayat level and 3 at Taluka Panchayat totalling to 296 People's Biodiversity Registers have been prepared. Till date 1647 PBRs at GP level and 23 PBRs at TP level, totalling to 1670 PBRs have been prepared. **(Annexure-III)**
3. **Recruitment of Consultant PBR**: As approved by the Chairman, KBB, one vacant post of Consultant (PBR) was advertised in the newspaper/s and on the website. The interview was conducted on 20th January 2018. Dr. K. Souravi has been selected for the post of Consultant (PBR) and she has reported for duty on 05/02/2018. She has been assigned the duties and responsibilities of co-ordinating the activities related to preparation of PBRs and constitution of BMCs.

The subject is placed before the Board for information.

**37/4 – ರಾಜ್ಯದಲ್ಲಿ ಜೀವವೈವಿಧ್ಯತೆಯ ಉದ್ಯಾನವನಗಳ ಸ್ಥಾಪನೆ:**

ನಗರ ಪ್ರದೇಶಗಳಲ್ಲಿ ಜೀವವೈವಿಧ್ಯ ಉದ್ಯಾನವನಗಳನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯು ಪರಿಕಲ್ಪನೆ ಟಿಪ್ಪಣಿ ತಯಾರಿಸಿದ್ದು, ಕರ್ನಾಟಕ ಜೀವವೈವಿಧ್ಯ ಮಂಡಳಿವತಿಯಿಂದ ರಾಜ್ಯದಲ್ಲಿ ಜೀವವೈವಿಧ್ಯ ಉದ್ಯಾನವನಗಳನ್ನು ಸ್ಥಾಪಿಸಿ, ನಗರ ಪ್ರದೇಶಗಳಲ್ಲಿನ ಸ್ಥಳೀಯ ಜೀವವೈವಿಧ್ಯತೆಯನ್ನು ಸಂರಕ್ಷಿಸಲು ಹಾಗೂ ಕಣ್ಮರೆಯಾಗುತ್ತಿರುವ ಸ್ಥಳೀಯ ಜೀವವೈವಿಧ್ಯತೆಯನ್ನು ಉಳಿಸಲು ತಿಳಿಸಿರುತ್ತಾರೆ.

ಸದರಿ ಪರಿಕಲ್ಪನೆ ಟಿಪ್ಪಣಿಯನ್ನು ಪರಿಗಣಿಸಿ ರಾಜ್ಯದಲ್ಲಿನ ಉಪಯುಕ್ತವಿರದ ಅಥವಾ ಅತ್ಯಲ್ಪ ಪ್ರಮಾಣದಲ್ಲಿ ಬಳಸಲ್ಪಡುತ್ತಿರುವ ಪ್ರದೇಶವನ್ನು ಗುರುತಿಸಿ, ಸಾರ್ವಜನಿಕರಿಗೆ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ಮನರಂಜನಾ ಸೌಲಭ್ಯ ಹೊಂದಿರುವ ಜೀವವೈವಿಧ್ಯ ಉದ್ಯಾನವನಗಳನ್ನು ಸ್ಥಾಪಿಸಲು ಸಲಹೆಯನ್ನು ನೀಡಿರುತ್ತಾರೆ.

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರು ಕರ್ನಾಟಕ ಅರಣ್ಯ ಇಲಾಖೆಯವರು ಪ್ರಸ್ತುತ ಅನುಷ್ಠಾನಗೊಳಿಸುತ್ತಿರುವ "ವೃಕ್ಷ ಉದ್ಯಾನವನ" ಯೋಜನೆಯನ್ನು ಪರಿಕಲ್ಪನೆ ಟಿಪ್ಪಣಿಯಲ್ಲಿನ ಅಂಶಗಳನ್ನು ಅನುಸರಿಸಿ "ಜೀವವೈವಿಧ್ಯ ಉದ್ಯಾನವನ" ಎಂದು ಮರುನಾಮಕರಣಗೊಳಿಸ ಬಹುದಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಅದರಂತೆ, ಪತ್ರ ಸಂ ಟಿಇಸಿ/ಸಿ02/ಬಯೋ-ಪಾರ್ಕ್/108/263 ದಿನಾಂಕ 27/06/2017ರಂದು ಪರಿಕಲ್ಪನೆ ಟಿಪ್ಪಣಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ (ಯೋಜನೆ) ಕಳುಹಿಸಲಾಗಿದೆ. ಇದೇ ರೀತಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆಯ ಸಹಕಾರದೊಂದಿಗೆ ಹೆಚ್ಚಿನ ಉದ್ಯಾನವನಗಳನ್ನು ಸ್ಥಾಪಿಸಬಹುದಾಗಿರುತ್ತದೆ. **(ಅನುಬಂಧ – IV)**

ಈ ವಿಷಯವನ್ನು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

**37/4. Establishment of Bio-parks in the State:**

A concept note on establishment of Biodiversity parks (Bio-parks) in urban localities was prepared by the MoEF-CC, the same has been sent to the Karnataka Biodiversity Board to setup bio-parks in the State in order to rescue and restore native biodiversity in urban areas. It has been advised to consider the concept note and earmark any unused, degradable or marginal landscapes where Biodiversity Park can be developed with associated educational, cultural and recreational facilities for public.

After going through the concept note, the Chairman, Karnataka Biodiversity Board, is of the opinion that the establishment of Tree Parks Scheme which is currently adopted by the Karnataka Forest Department could be renamed as establishment of Biodiversity Parks by following the concept note circulated by the MOEF-CC request was sent to Additional Principal Chief Conservator of Forests (Project) vide letter No. TEC/C02/Bio-park/108/263 dated 27/06/2017. In this way many bio-parks can be setup with the support of Karnataka Forest Department. **(Annexure-IV).**

The matter is placed before the Board for deliberation and decision.

**37/5. ಡಿಫಾಲ್ಟ್ ಕಂಪನಿಗಳ ವಿರುದ್ಧ ಕಾನೂನು ಕ್ರಮ ಮತ್ತು ದೂರುಗಳನ್ನು ಸಲ್ಲಿಸುವಿಕೆ:**

ಮಂಡಳಿಯ 35ನೇ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಿದಂತೆ, ಇದುವರೆಗೂ ಅಂತಿಮ ನೋಟಿಸ್‌ಗಳನ್ನು ಹಾಗೂ ವಿಚಾರಣೆಗೆ ಸಾಕಷ್ಟು ಅವಕಾಶಗಳನ್ನು ನೀಡಲಾಗಿದ್ದರೂ ಸಹ ನಮೂನೆ-I ರ ಅರ್ಜಿಯನ್ನು

ಸಲ್ಲಿಸಿರದ 5 ಡಿಫಾಲ್ಟ್ ಕಂಪನಿಗಳಾದ, M/s. ಆರ್ಯವೈದ್ಯ ಶಾಲಾ ಕಂಪನಿ, ನಂಜನಗೂಡು, M/s.SAVA ಪ್ರೈವೆಟ್ ಲಿಮಿಟೆಡ್, ಬೆಂಗಳೂರು, M/s. ಪ್ರಧಾನ್ ಹರ್ಬಲ್ ಕಂಪೆನಿ, M/s. ಪಂಡಿತ್ ಫಾರ್ಮಾಸ್ಯೂಟಿಕಲ್ಸ್ ಮತ್ತು ರಿಸರ್ಚ್ ಸೆಂಟರ್, ಮದ್ದೂರು ಮತ್ತು M/s. ಇಂಡ್ ಕ್ಯಾಶಿಯಾ, ಮೈಸೂರು ಕಂಪನಿಗಳಿಗೆ ಜೈವಿಕ ವೈವಿಧ್ಯ ಅಧಿನಿಯಮ, 2002ರ ಪ್ರಕರಣ 55(2)ರಡಿಯಲ್ಲಿ ಆಯಾ ವ್ಯಾಪ್ತಿಗೊಳಪಡುವ ನ್ಯಾಯಾಲಯಗಳಲ್ಲಿ ಮಂಡಳಿಯಿಂದ ದೂರುಗಳನ್ನು ಸಲ್ಲಿಸಲಾಗಿದೆ.

2014-15ರ ಹಣಕಾಸಿನ ವರ್ಷದಿಂದ ಮಂಡಳಿಯಲ್ಲಿ ಇದುವರೆಗೂ ಬಳಕೆ ಮತ್ತು ಲಾಭ ಹಂಚಿಕೆಯ ಮೊತ್ತ ರೂ. 48 ಲಕ್ಷಗಳು ಸಂಗ್ರಹವಾಗಿರುತ್ತದೆ. ಔಷಧಿ ಪರವಾನಿಗೆ ಪ್ರಾಧಿಕಾರ(ಆಯುಷ್)ದಿಂದ ಬಂದಂತಹ 30 ಕಂಪನಿಗಳ ಮಾಹಿತಿಯ ಆಧಾರದ ಮೇಲೆ ಈ ಕಂಪನಿಗಳಿಗೆ ಅಂತಿಮ ನೋಟಿಸ್‌ಗಳನ್ನು ಕಳುಹಿಸಲಾಗಿದೆ. ಆಯುಷ್ ಇಲಾಖೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಔಷಧಿ ಕಂಪನಿಗಳು ನೋಂದಾಯಿಸಲ್ಪಟ್ಟಿದ್ದು, ಅವುಗಳಲ್ಲಿ 2017-18ನೇ ಹಣಕಾಸಿನ ವರ್ಷದ ಸಾಲಿನಲ್ಲಿ ಕೇವಲ 39 ಕಂಪನಿಗಳು ಮಾತ್ರ ಮುಂಚಿತವಾಗಿ ತಿಳಿಸುವ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಔಷಧಿ ಪರವಾನಿಗೆ ಪ್ರಾಧಿಕಾರ (ಆಯುಷ್) ಇಲಾಖೆಗೆ ತಮ್ಮ ಇಲಾಖೆಗಳಲ್ಲಿ ನೋಂದಾಯಿಸಲ್ಪಟ್ಟ ಎಲ್ಲ ಕಂಪನಿಗಳ ಪರವಾನಿಗೆ ಮಾಹಿತಿ ಹಾಗೂ ಇತರ ವಿವರಗಳ ಮಾಹಿತಿಯನ್ನು ಕಳುಹಿಸಿಕೊಡಲು ಕೆಲವು ನೋಟಿಸ್‌ಗಳನ್ನು ಕಳುಹಿಸಲಾಗಿದೆ ಅಲ್ಲದೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸುವಂತೆ ಕೋರಲಾಗಿದೆ.

ಮಂಡಳಿಯು ಕಳುಹಿಸುವ ನೋಟಿಸ್‌ಗಳನ್ನು ನಿರ್ಲಕ್ಷಿಸುವ ಎಲ್ಲ ಕಂಪನಿಗಳ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳುವಂತೆ ಈಗಾಗಲೇ ಮಂಡಳಿಯ ಕೆಲವು ಸಭೆಯಲ್ಲಿ ಚರ್ಚಿಸಲಾಗಿದ್ದು, ಅಂತಹ ಕಂಪನಿಗಳ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲು ನಿರ್ಧರಿಸಲಾಗಿದೆ. ಮೇಲೆ ತಿಳಿಸಿದ 5 ಕಂಪನಿಗಳಿಗೆ (35ನೇ ಮಂಡಳಿ ಸಭೆ) ಮಂಡಳಿಯ ಪರವಾಗಿ ದೂರುಗಳನ್ನು ಸಲ್ಲಿಸುವುದಕ್ಕಾಗಿ SEIAAದಿಂದ ನಮೂದಿಸಿದ ವಕೀಲರಾದ ಶ್ರೀ. ಹೆಚ್. ಕೆ. ವಸಂತ್‌ರವರನ್ನು ನೇಮಿಸಿಕೊಳ್ಳಲು ನಿರ್ಧರಿಸಲಾಯಿತು. ಪ್ರತಿ ಪ್ರಕರಣಕ್ಕೆ ರೂ. 15000ವನ್ನು (20 ವಿಚಾರಣೆಗಳಿಗೆ) ವೆಚ್ಚವನ್ನು ಮಂಡಳಿಗೆ ಸಲ್ಲಿಸಲು (SEIAAರವರು ಭರಿಸುವ ವೆಚ್ಚದಂತೆ) ಸೂಚಿಸಲಾಯಿತು. **(ಅನುಬಂಧ-V)** ಇದಲ್ಲದೆ, ಈ ಕಂಪನಿಗಳು ಇರುವಂತಹ ವ್ಯಾಪ್ತಿಗೊಳಪಡುವ ನ್ಯಾಯಾಲಯಗಳಿಗೆ ಹೋಗಿ ಪ್ರತಿ ಕಂಪನಿಯ ವಿರುದ್ಧ ದೂರುಗಳನ್ನು ಸಲ್ಲಿಸಬೇಕಾಗಿರುತ್ತದೆ.

ದಿನಾಂಕ 07ನೇ ಜನವರಿ 2009ರ ಭಾರತದ ಗೆಜೆಟ್ ಅಧಿಸೂಚನೆಯಲ್ಲಿ ಪ್ರಕಟಿಸಿರುವಂತೆ, ವಲಯ ಅರಣ್ಯ ಅಧಿಕಾರಿಗಳು (RFO) ಮತ್ತು ಅವರ ಮೇಲಿನ ಅಧಿಕಾರಿಗಳು ಜೈವಿಕ ವೈವಿಧ್ಯ ಅಧಿನಿಯಮದಡಿ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಂಪನಿಗಳ ವಿರುದ್ಧ ದೂರುಗಳನ್ನು ಸಲ್ಲಿಸಲು ಅಧಿಕಾರವನ್ನು ನೀಡಲಾಗಿದೆ. **(ಅನುಬಂಧ-VI)**

ಮೇಲೆ ತಿಳಿಸಿದ ಹಿನ್ನಲೆಯಲ್ಲಿ, ಈ ಕೆಳಗಿನ ಅಂಶಗಳನ್ನು ಮಂಡಳಿಯ ಗಮನಕ್ಕಾಗಿ ತಿಳಿಸಲಾಗಿದೆ.

1. ದೂರು ಸಲ್ಲಿಸಲು ಮಂಡಳಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ, ಡಿಫಾಲ್ಟ್ ಕಂಪನಿಗಳ ವಿರುದ್ಧ ದೂರುಗಳನ್ನು ಸಲ್ಲಿಸಲು ಸ್ಥಳೀಯ ಪ್ರದೇಶಗಳಲ್ಲಿ ಮಂಡಳಿಯಿಂದ ಪ್ರತಿನಿಧಿಸಲು ವಲಯ ಅರಣ್ಯ ಅಧಿಕಾರಿಗಳ ಶ್ರೇಣಿ ಅಥವಾ ಮೇಲ್ಪಟ್ಟ ಅಧಿಕಾರಿಗಳನ್ನು ಅಧಿಕೃತಗೊಳಿಸಲು ಅರಣ್ಯ ಇಲಾಖೆಗೆ ವಿನಂತಿಸಬಹುದೇ?

2. ಅರಣ್ಯ ಇಲಾಖೆಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ನ್ಯಾಯಾಲಯಗಳಲ್ಲಿ ದೂರುಗಳನ್ನು ಸಲ್ಲಿಸಲು ವಕೀಲರನ್ನು ನೇಮಕ ಮಾಡಲು ಅಧಿಕಾರ ನೀಡಬಹುದೇ ಮತ್ತು ವಕೀಲರು ಐಖಿಂ ದವರು ಅನುಮೋದಿಸಿದ ಶುಲ್ಕವನ್ನು ಮತ್ತು ಮಂಡಳಿಯಿಂದ ಅಳವಡಿಸಬಹುದೇ?

3. ಮಂಡಳಿಯು ಭಾರತ ಶಾಸನದ ಸರ್ಕಾರವನ್ನು ಅನುಷ್ಠಾನಗೊಳಿಸುವುದರಿಂದ ಮತ್ತು ನಿಗಮವಲ್ಲದ (ಲಾಭಮಾಡುವಿಕೆಯ ದೃಷ್ಟಿಯಿಂದ), ಬಜೆಟ್‌ನ ಹಂಚಿಕೆ ಇಲ್ಲದ ಕಾರಣ ಮಂಡಳಿಯ ಪರವಾಗಿ ಸರ್ಕಾರದ ಸಾರ್ವಜನಿಕ ಅಭಿಯೋಜಕರು ಮೊಕದ್ದಮೆಗಳನ್ನು ನಡೆಸಲು ನಿಯೋಜಿಸಿ ಎಂದು ಕೋರಲಾಗಿದೆ. ಹಾಗೆಯೇ ಈ ಉದ್ದೇಶಕ್ಕಾಗಿ ಮಂಡಳಿಯಿಂದ ಯಾವುದೇ ಅನುದಾನದ ಲಭ್ಯವಿರುವುದಿಲ್ಲ.

ಆದ್ದರಿಂದ, ಕಾನೂನು ಕ್ರಮಗಳನ್ನು ಮುಂದುವರಿಸಲು ಚರ್ಚೆ ಹಾಗೂ ಮಂಡಳಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**37/5. Legal action against defaulting entities and filing of complaints**:

As resolved in the 35th meeting of the Board, complaints against the 5 defaulting companies, M/s. Arya Vaidya Sala, Nanjangud, M/s Sava Ltd, Bangalore, M/s. Pradhan Herbal Company, M/s Pandit's Pharmaceuticals and Research Centre, Maddur, M/s. Ind Cassia, Mysore, which were given final notices and ample opportunity for hearing have been filed in the jurisdictional courts for non-submission of Form-I to the KBB as under section 55(2) of the BD Act, 2002.

The ABS amount accrued in the Board since 2014-15 is about Rs. 48 Lakhs. Final notices to 30 entities have also been issued after verification of their license status from the Licensing Authority (AYUSH). There are over 200 companies registered under the AYUSH Dept and only 39 such companies have submitted prior intimation to the Board for the year 2017-18. Several requests to the Dept. of Health and Family Welfare and AYUSH Dept were sent to obtain the license status and other details of all the registered companies and also a request was made to the ACS, FEE to address the ACS, Dept. of Health and Family Welfare highlighting the requirements for further action.

The matter regarding initiating legal action against all those companies that continue to ignore the notices sent by the Board was discussed during several Board meetings and it was resolved to initiate legal action against all such companies. It was also resolved to hire the

services of the advocate empanelled with the SEIAA, Mr. H.K Vasanth, for filing of complaints on behalf of the Board for the above mentioned 5 companies (35th Board meeting). The expenditure to the Board for filing each case (same as in SEIAA) works out to be above Rs.10000 per case (upto 20 hearings). **(Annexure-V)** Moreover, the complaint against each company has to be filed in the jurisdictional courts in the location where the company is located.

As per the notification in the Gazette of India dt: 7th January 2009, Forest officers of the rank of Range Forest Officer (RFO) and above are authorised to file complaints under the BD Act in their jurisdiction. **(Annexure -VI)**

With the background mentioned above, the following points are put up to the Board for deliberation.

1. The Forest Department be requested to authorise officers of the rank of RFO or above to represent the Board in the local areas for filing of the complaints against defaulting entities, since there is lack of manpower in the Board to file complaints.

2. Officers of the Forest Department be authorised to hire advocates to file the complaints in their jurisdictions and the advocates may be paid fees (as sanctioned in the SEIAA and being adopted by the KBB).

OR

3. Since the Board is implementing a Government of India statute and is not a Corporation (in terms of profit making), it is requested that the Government Public Prosecutors are assigned to conduct litigations on behalf of the Board, as there are no budgetary allocation in the Board for this purpose.

Therefore, the matter is put up for further discussion and approval of the Board for pursuing legal action.

**2. ಮಂಡಳಿಯ ಹೊಸ ಅಂತರ್ಜಾಲ ನವೀಕರಣ ಹಾಗೂ ಎಬಿಎಸ್ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಪದ್ಧತಿ:**

ಮಂಡಳಿಯಲ್ಲಿ ಈಗಾಗಲೇ ಹೊಸ ವೆಬ್‌ಸೈಟ್ www.karnataka.gov.in/kbbನ್ನು ನವೀಕರಿಸಿ ಆಯೋಜಿಸಲಾಗಿದೆ.

ನಮೂನೆ- I, ನಮೂನೆ- A ಮತ್ತು ಎಬಿಎಸ್ ಅರ್ಜಿ ನಮೂನೆಗಳನ್ನು ರಾಜ್ಯದ ವಿವಿಧ ಕಂಪನಿಗಳಿಗೆ ಆನ್‌ಲೈನ್‌ನಲ್ಲಿ ಸಲ್ಲಿಸಲು ಆನ್‌ಲೈನ್ ಅರ್ಜಿಗಳ ವ್ಯವಸ್ಥೆಯನ್ನು ಮಂಡಳಿಯ ಹೊಸ ಅಂತರ್ಜಾಲದಲ್ಲಿ ಆಯೋಜಿಸಲಾಗಿದೆ.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**2. New website and online application system for ABS Applications:**

The website of the Board has now been updated and hosted at www.karnataka.gov.in/kbb.

An online application system to file Form-I, Form-A and Form-ABS Calculation for various entities has been developed and has been hosted on the new website of the Board.

The same is put up for the kind information of the Board.

**37/6 – ಯುಎನ್‌ಇಪಿ–ಜೆಫ್–ಎಂಓಇಎಫ್–ಎಬಿಎಸ್ ಯೋಜನೆಯ 'ಜೈವಿಕವೈವಿಧ್ಯತೆಯ ಅಧಿನಿಯಮದ ಅನುಷ್ಠಾನವನ್ನು ಬಲಪಡಿಸುವುದು ಮತ್ತು ನಿಯಮಗಳು ಅದರ ಬಳಕೆ ಮತ್ತು ಲಾಭದ ಹಂಚಿಕೆ ನಿಬಂಧನೆಗಳ ಮೇಲೆ ಕೇಂದ್ರಿಕರಣ:**

1. **ತಾಂತ್ರಿಕ ಸಹಾಯಕರ ಹಾಗು ಕಂಪ್ಯೂಟರ್ ಸಹಾಯಕರ ನೇಮಕಾತಿ** : ಯುಎನ್‌ಇಪಿ–ಜೆಫ್–ಎಂಓಇಎಫ್–ಎಬಿಎಸ್ ಯೋಜನೆಯು ಡಿಸೆಂಬರ್ 2017ರಂದು ಮುಕ್ತಾಯಗೊಂಡಿತು. (ಇಮೇಲ್ ಪತ್ರ ದಿನಾಂಕ 28/12/2018) ಮುಂದುವರೆದಂತೆ ಯೋಜನೆಯು ಡಿಸೆಂಬರ್ 2018ರವರೆಗೆ ತಾಂತ್ರಿಕವಾಗಿ ಮುಂದುವರೆಯಿತು. ಈ ಯೋಜನೆಯಡಿಯಲ್ಲಿ ಖಾಲಿಯಿದ್ದ 2 ಹುದ್ದೆಗಳಾದ ತಾಂತ್ರಿಕ ಸಹಾಯಕರು ಹಾಗು ಕಂಪ್ಯೂಟರ್ ಸಹಾಯಕರುಗಳ ಹುದ್ದೆಯನ್ನು ಭರ್ತಿ ಮಾಡಲು ವಾರ್ತಾ ಪತ್ರಿಕೆಗಳಲ್ಲಿ ಹಾಗೂ ಮಂಡಳಿಯ ವೆಬ್‌ಸೈಟ್‌ನಲ್ಲಿ ಜಾಹಿರಾತನ್ನು ಪ್ರಕಟಿಸಿ ದಿನಾಂಕ 20/01/2018ರಂದು ಸಂದರ್ಶನವನ್ನು ಕರೆಯಲಾಯಿತು. ಅದರಂತೆ ತಾಂತ್ರಿಕ ಸಹಾಯಕರು ಹಾಗು ಕಂಪ್ಯೂಟರ್ ಸಹಾಯಕರುಗಳ ಹುದ್ದೆಗಳನ್ನು ನೇಮಕಾತಿಗೊಳಿಸಲಾಯಿತು. ವಿವರ ಕೆಳಕಂಡಂತಿದೆ:

| ಹೆಸರು | ಹುದ್ದೆ | ವಿದ್ಯಾರ್ಹತೆ | ವರದಿ ದಿನಾಂಕ |
|---|---|---|---|
| 1. ಫರೀನ್ ನಾಜ್ | ತಾಂತ್ರಿಕ ಸಹಾಯಕರು | ಎಂ.ಎಸ್.ಸಿ (ಸೂಕ್ಷ್ಮ ಜೀವಿಶಾಸ್ತ್ರ) | 5ನೇ ಫೆಬ್ರವರಿ 2018 |
| 2. ಸುಕ್ಷಿತಾ ಎ.ಎಸ್ | ಕಂಪ್ಯೂಟರ್ ಸಹಾಯಕರು | ಎಂ.ಟೆಕ್ (ಎನ್ವಿರಾನ್‌ಮೆಂಟಲ್ ಇಂಜಿನಿಯರಿಂಗ್) | 19ನೇ ಫೆಬ್ರವರಿ 2018 |

2. **ಸಾಗರ ಜೈವಿಕ ಸಂಪನ್ಮೂಲಗಳ ತಜ್ಞರ ಸಮಿತಿಯ ಮುಕ್ತಾಯ:**

ಸಾಗರ ಜೈವಿಕ ಸಂಪನ್ಮೂಲಗಳ ತಜ್ಞರ ಸಮಿತಿಯನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿ ಪತ್ರ ಸಂ: ಕೆಬಿಬಿ/ಜೆಇಎಫ್/07–ಮೆರೈನ್/14–15/1079ರ ದಿನಾಂಕ 03/02/2017ರಂದು ಸಾಗರ ವಲಯದಲ್ಲಿನ ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಲಾಭ ಹಂಚಿಕೆ ನಿಬಂಧನೆಗಳ ಅನುಷ್ಠನದ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಲು, ಪರಿಶೀಲಿಸಲು, ನಿಯಮಗಳು ಹಾಗು ಸಂಬಂಧಿತ ಅಧಿಸೂಚನೆಗಳ ಮೇರೆಗೆ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುಷ್ಠಾನಗೊಳಿಸಿತು. ಈ ಸಮಿತಿಯು ಒಂದು ವರ್ಷದ

ಅವಧಿಯವರೆಗೆ ಚಾಲ್ತಿಯಲ್ಲಿದ್ದು ಮಂಡಳಿಯ ಅಧ್ಯಕ್ಷರ ಅನುಮೋದನೆ ಮೇರೆಗೆ ಸಮಿತಿಯನ್ನು ಮುಕ್ತಾಯಗೊಳಿಸಲಾಯಿತು.

ಈ ವಿಷಯವನ್ನು ಮಂಡಳಿ ಸಭೆಗೆ ಮಾಹಿತಿಗಾಗಿ ಮಂಡಿಸಲಾಗಿದೆ.

**37/6: UNEP-GEF-MoEF-ABS Project on "Strengthening the implementation of the Biological Diversity Act and Rules with focus on its ABS Provisions"**

1. **Recruitment of Technical and Computer Assistant:**

   The UNEP-GEF-MoEF-ABS Project was due for completion in the month of December 2017 (Email dated 28th December 2017 appended). However the project has been technically extended until December 2018 and two vacant positions were advertised in the newspaper/s and on the website and the interview was conducted on 20th January 2018. Accordingly, a Technical Assistant and a Computer Assistant were recruited to continue in the project. Details of newly recruited staff are appended below:

| Name | Post | Qualification | Date of Joining |
|---|---|---|---|
| 1.Farheen Naaz | Tech.Asst. | MSc (Micro.Bio) | 5th Feb, 2018 |
| 2.Sukshitha A.S | Com. Asst | M.Tech (Envt. Eng.) | 19th Feb, 2018 |

The matter is placed before the Board for information.

2. **Dissolution of the Expert Committee on Marine Biological Resources:**

The Expert Committee on Marine Biological Resources was constituted by Karnataka Biodiversity Board vide letter no. KBB/GEF/07-Marine/14-15/1079 dated 03-02-2017 to understand and review the problems of conservation and the scope of implementation of the access and benefit sharing provisions in the marine sector and to take appropriate decisions in line with Act, Rules and related notifications. As per the terms of reference (TOR) of the committee the term of the committee is valid for one year and hence as approved by Chairman, KBB the committee is dissolved.

The matter is placed before the Board for information.

**37/7 – ಜೈವಿಕವೈವಿಧ್ಯದ ಅಂತರಾಷ್ಟ್ರೀಯ ದಿನಾಚರಣೆ 2018:**

ರಾಷ್ಟ್ರೀಯ ಜೀವವೈವಿಧ್ಯದ ಪ್ರಾಧಿಕಾರವು ತಿಳಿಸಿದಂತೆ 22ನೇ ಮೇ 2018ರಂದು ಅಂತರಾಷ್ಟ್ರೀಯ ಜೀವವೈವಿಧ್ಯತಾ ದಿನಾಚರಣೆಯ ಸಂದರ್ಭದಲ್ಲಿ "ಜೀವವೈವಿಧ್ಯದ 25 ವರ್ಷಗಳ ಕ್ರಮಗಳ ಕುರಿತು ಆಚರಣೆ" ಎಂಬ ಘೋಷಾವಾಕ್ಯದಡಿಯಲ್ಲಿ ಆಚರಿಸಲಾಗುವುದು. ಡಿಸೆಂಬರ್ 29, 1993ರಂದು ಕನ್ವೆನ್ಷನ್ ಜಾರಿಗೊಳಿಸಿತು ಹಾಗೂ 2018ರ ವರ್ಷವು ಅದರ ಅಸ್ತಿತ್ವದ 25 ವರ್ಷಗಳಾಗಿರುತ್ತದೆ. ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಸಿಬಿಡಿ ಉದ್ದೇಶಗಳ ಸಾಧನೆಯಿಂದಾಗಿ ಪ್ರಗತಿಗೆ ಈ ಘೋಷಣೆಯು ಮಹತ್ವ ನೀಡುತ್ತದೆ. ಈ ಕಾರ್ಯಕ್ರಮವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯು ಬೆಂಗಳೂರಿನಲ್ಲಿ ಆಚರಿಸಲು ಯೋಜಿಸಿದ್ದು ಈ ಕಾರ್ಯಕ್ರಮದಡಿಯಲ್ಲಿ ಛಾಯಾಗ್ರಹಣ ಮತ್ತು ವರ್ಣಚಿತ್ರಗಳಂತಹ ಸ್ಪರ್ಧೆಗಳನ್ನು ನಡೆಸಲಾಗುವುದು.

2018ರಂದು ಅಂತರಾಷ್ಟ್ರೀಯ ಜೀವವೈವಿಧ್ಯತಾ ದಿನಾಚರಣೆಯ ಆಚರಣೆಗಾಗಿ ಅನುದಾನದ ಬಿಡುಗಡೆ ಕೋರಿ ಪ್ರಸ್ತಾವನೆಯನ್ನು ರಾಷ್ಟ್ರೀಯ ಜೀವವೈವಿಧ್ಯದ ಪ್ರಾಧಿಕಾರಕ್ಕೆ ಕಳುಹಿಸಲಾಗುವುದು. ಪ್ರಾಧಿಕಾರದಿಂದ ಮಂಜೂರಾದ ಅನುದಾನದಲ್ಲಿ ಕಡಿಮೆಯಾದ ಪಕ್ಷದಲ್ಲಿ ಅದನ್ನು ಮಂಡಳಿಯು ಭರಿಸಲ್ಪಡಬಹುದು. ರಾಷ್ಟ್ರೀಯ ಜೀವವೈವಿಧ್ಯದ ಪ್ರಾಧಿಕಾರದಿಂದ ಐಬಿಡಿ ಆಚರಣೆಯ ಬಗ್ಗೆ ಸ್ವೀಕರಿಸಿದ ಪತ್ರವನ್ನು ಲಗತ್ತಿಸಲಾಗಿದೆ. **(ಅನುಬಂಧ – VII)**

ಈ ವಿಷಯವನ್ನು ಮಂಡಳಿಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## 37/7: International Day for Biological Diversity (IDB) 2018:

Consequent to the communication from National Biodiversity Authority (NBA), the theme for the 2018 International Day for Biological Diversity is "Celebrating 25 years of Action for Biodiversity". On December $29^{th}$, 1993, the Convention entered into force and year 2018 marks 25 years of its existence. The theme would highlight the progress made in the achievement of CBD objectives at the national and global levels. Karnataka Biodiversity Board is planning to host the event in Bengaluru and also conduct competitions like photography and painting to celebrate the event.

A proposal for sanction of budget for celebrating IDB 2018 will be sent to NBA shortly. If there is a shortfall of sanctioned amount by NBA the difference may be borne by the Board. The letter received by the NBA is placed in (**Annexure-VII).**

The matter is placed before the Board for deliberation and approval.

**37/8– ಅಧ್ಯಕ್ಷರ ಅನುಮೋದನೆ ಮೇರೆಗೆ ಇತರೆ ಯಾವುದಾದರೂ ವಿಷಯಗಳು.**

## 37/8 - Any other subject with the permission of the Chair.

ಸಹಿ/–

**ಸದಸ್ಯ ಕಾರ್ಯದರ್ಶಿ**

**ಕರ್ನಾಟಕ ಜೀವವೈವಿಧ್ಯ ಮಂಡಳಿ**